ಹೊಡೆಯುತ್ತಾ ಸದಾ ಜೀವಂತವಾಗಿರುತ್ತದೆ ಎನ್ನುವುದು ಅರ್ಥವಾಗದ ಸೋಜಿಗ. ಅವೆಲ್ಲಾ ನೆನಪಿಟ್ಟುಕೊಳ್ಳಬೇಕಾದ ಪ್ರಾಮುಖ್ಯದ ಸಂಗತಿಗಳಾಗಿಲ್ಲದಿದ್ದರೂ ಕೂಡಾ ನೆನಪಿನಲ್ಲಿ ಉಳಿದುಕೊಂಡು ಬಿಡುತ್ತವೆ ಮತ್ತು ನೆನಪಿಟ್ಟುಕೊಳ್ಳಬೇಕೆಂದುಕೊಂಡ ಸಂಗತಿಗಳು, ವ್ಯಕ್ತಿಗಳು, ಹೆಸರುಗಳು ಸಮಯಕ್ಕೆ ಕೈ ಕೊಟ್ಟು ಮುಜುಗರ ತರಿಸಿಬಿಡುತ್ತವೆ. ನಾಸಿಕಾಗ್ರವನ್ನು ಕೆರಳಿಸುವ, ಅರಳಿಸುವ ಪರಿಮಳದ ವಿಷಯದಲ್ಲೂ ಕೂಡಾ ಇಂತದೇ ಅಭಿಪ್ರಾಯಕ್ಕೆ ಬಂದುಬಿಡಬಹುದೇನೋ. ಯಾವುದೋ ಸೋಪಿನ ಪರಿಮಳದೊಂದಿಗೆ ತಳುಕು ಹಾಕಿಕೊಂಡ ಮತ್ಯಾವುದೋ ನೆನಪು. ಪೌಡರಿನ ಘಮದೊಡನೆ ಯಾವುದೋ ನವಿರು. ಮೆಟ್ಟುಗತ್ತಿಯ ವಿಷಯಕ್ಕೆ ಬರೋಣ. ಕಡೆಗೋಲು ಕಂಬದ ಸಾಕ್ಷಿಯಲ್ಲಿ ನಡೆಯುವ ಕಥಾನಕವನ್ನು ಮಾನ್ಯ ಕು.ವೆಂ.ಪು. ಅವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ನಮ್ಮ ಮನೆಯ ಮೆಟ್ಟುಗತ್ತಿಗೂ ಕೂಡಾ ಕಡೆಗೋಲು ಕಂಬದ ಆ ಸ್ಥಾನವನ್ನು ನಿಸ್ಸಂದೇಹವಾಗಿ ಕೊಡ ಮಾಡಬಹುದು. ದಶಕಗಳ ಜೀವನಯಾತ್ರೆಯಲ್ಲಿ ನಾಲ್ಕಾರು ಮನೆ ಬದಲಿಸಬೇಕಾದ ಸಂದರ್ಭ ಬಂದರೂ ಯಾವುದೇ ಕಾರಣಕ್ಕೂ ನಾನು ಮೆಟ್ಟುಗತ್ತಿಯನ್ನು ಕೈ ಬಿಟ್ಟಿಲ್ಲ. ತಳ ಕಿತ್ತುಕೊಂಡು ಹೋಗಬೇಕಾದ ಸಂದರ್ಭದಲ್ಲಿ ಬೆಲೆಬಾಳುವ ಫ್ರಿಜ್ಜು, ಸೋಫಾ ಸೆಟ್ಟು, ಡೈನಿಂಗ್ ಟೇಬಲ್ ಇತ್ಯಾದಿ ಇತ್ಯಾದಿಗಳನ್ನು ನಿರ್ಮೋಹದಿಂದ ತ್ಯಜಿಸಿ ಬಂದಿದ್ದಿದೆಯಾದರೂ ಮೆಟ್ಟುಗತ್ತಿ ನನ್ನ ಇನ್ನೊಂದು ಪ್ರಾಣದಂತೆ, ಅಥವಾ ಅದ್ಯಾವುದೋ ರಾಕ್ಷಸನ ಪ್ರಾಣ ಗಿಣಿಯ ಕೊರಳಲ್ಲಿತ್ತು ಅನ್ನುವ ಜನಪದ ಕತೆಯಂತೆ ನನ್ನ ಪ್ರಾಣ ಮೆಟ್ಟುಗತ್ತಿಯಲ್ಲಿ ಅಂತರ್ಗತವಾಗಿದೆ. ಅದಿಲ್ಲದಿದ್ದರೆ ನನ್ನ ಬಲಗೈ ಮುರಿದು ಹೋದಂತೆ. ಪಾತ್ರೆಪಡಗಗಳಲ್ಲಾದರೆ ಹೊಂದಾಣಿಕೆ ಮಾಡಿಕೊಳ್ಳಬಹುದು. ಆದರೆ ಹೆಚ್ಚುವ, ತುರಿಯುವ ಕೆಲಸ ಸುಸೂತ್ರವಾಗಿ, ಸಾಂಗೋಪಾಂಗವಾಗಿ ಮುಗಿಯಬೇಕೆಂದರೆ ನಾನು ವಿಪರೀತವಾಗಿ ಹೊಂದಿಕೊಂಡಿರುವ, ಹಚ್ಚಿಕೊಂಡಿರುವ ಮೆಟ್ಟುಗತ್ತಿ ನನ್ನ ಸುಪರ್ದಿನಲ್ಲಿಲ್ಲದಿದ್ದರೆ ಅಸಾಧ್ಯ. ಮೆಟ್ಟುಗತ್ತಿಯ ಕಥಾನಕದೊಂದಿಗೆ ಸುರುಳಿ ಬಿಚ್ಚಿಕೊಳ್ಳುತ್ತಿವೆ ಹಳೆಯ ಸವಿ ನೆನಪುಗಳು. ಈಗ ಇಲ್ಲದ ನನ್ನಮ್ಮ ಹಿತ್ತಿಲಲ್ಲಿ ಬೆಳೆದ ಕೆಂಬರಿವೆ ಸೊಪ್ಪಿನ ಮಡಿಗಳಿಂದ ಸೊಪ್ಪು ಕಿತ್ತುಕೊಂಡು, ಅಡಿಕೆದೋಣಿಯಲ್ಲಿ ಹರಿದು ಬೀಳುವ ಒಗದೆ ನೀರಿನಲ್ಲಿ ಅದನ್ನು ಸ್ವಚ್ಛ ಮಾಡಿ, ಮೆಟ್ಟುಗತ್ತಿಯ ಮೇಲೆ ಕೂತು ಸೊಪ್ಪನ್ನು ಬಿಗಿ ಮುಷ್ಟಿಯಲ್ಲಿ ಹಿಡಿದು ಹೆಚ್ಚುತ್ತಿದ್ದುದು ಯಾವ ನಾಜೂಕಿನ ಕರಕುಶಲತೆಗೂ ಕಡಿಮೆ ಇಲ್ಲ ಎಂದು ನನ್ನ ಅಭಿಮಾನದ ಅನಿಸಿಕೆ. ಸಣ್ಣಗೆ ಒಂದೇ ಅಳತೆಯಲ್ಲಿ ಕೊರೆಕೊರೆದು ಹೆಚ್ಚುತ್ತಿದ್ದ ಸೊಪ್ಪು. ತರಕಾರಿ ಹೆಚ್ಚಿದರೂ ಅಷ್ಟೇ. ತೂಕ ಮಾಡಿದರೂ ಎಲ್ಲಾ ಹೋಳುಗಳೂ ಒಂದೇ ತೂಕವಾಗುತ್ತವೆ ಎನ್ನುವಷ್ಟು ಕರಾರುವಾಕ್ಕು. ಹೆಂಗಸರ ಕುಶಲತೆ ಏನಿದ್ದರೂ ಮನೆಯ ನಾಲ್ಕು ಗೋಡೆಗಳ ನಡುವೆ ವ್ಯಕ್ತವಾಗುತ್ತಿದ್ದ ಕಾಲ. ಈ ಗೋಡೆಗಳ ಆಚೆಯೂ ಒಂದು ಕಾಲಿಟ್ಟಿದ್ದ ಅಮ್ಮ ತನಗೆ ಸಿಗುತ್ತಿದ್ದ ಅತ್ಯಲ್ಪ ಬಿಡುವಿನ ಕಾಲದಲ್ಲಿ ಬಣ್ಣಬಣ್ಣದ ಸಂತದ ತಗಡು ಅಂಟಿಸಿದ ಥರಾವರಿ ಗೆಜ್ಜೆವಸ್ತ್ರಗಳನ್ನು ಮಾಡಿ ಮದುವೆಯಾದ ಹೆಮ್ಮಕ್ಕಳ ಮನೆಗೆ ಗೌರಿ ಬಾಗಿನದ ಜೊತೆ ತಲುಪಿಸುತ್ತಿದ್ದಳು. ಶುಭ್ರ ಬಿಳುಪಿನ ಹತ್ತಿಯ ಈ ಗೆಜ್ಜೆಸ್ತ್ರಗಳು ಗೌರಿಪೂಜೆಗೆ ಬಳಕೆಯಾಗಿ, ನಂತರ ಮನೆಯ ಬಾಗಿಲ ತೋರಣವಾಗಿ, ಬಣ್ಣ ಮಾಸುವವರೆಗೆ ರಾರಾಜಿಸುತ್ತಿದ್ದುವು. ಆಸಕ್ತರ ಗಮನ ಸೆಳೆಯುತ್ತಿದ್ದುವು. ಈ ಸಂದರ್ಭದಲ್ಲಿ ಇನ್ನೊಂದೇನೋ ನೆನಪಿಗೆ ಬರುತ್ತಿದೆ. ಬೂದುಗುಂಬಳಕಾಯಿಯನ್ನು ಹೆಂಗಸರು ಇಬ್ಭಾಗ ಮಾಡಬಾರದು ಅನ್ನುವ ಒಂದು ಪದ್ಧತಿ ನಮ್ಮ ಹಳ್ಳಿಮನೆಗಳಲ್ಲಿ ಚಾಲ್ತಿಯಲ್ಲಿತ್ತು. ಅದೇನಿದ್ದರೂ ಗಂಡಸರ ಪಾರುಪತ್ಯ. ಬೂದುಗುಂಬಳ ಶಿವಲಿಂಗದ ಆಕಾರದಲ್ಲಿರುವುದರಿಂದ, ಮತ್ತು ಬೂದಿ ಬಳಿದಂತಿರುವುದರಿಂದ